ಒಬ್ಬರು ಮಾನ್ಯ ಸದಸ್ಯರು.—ಪ್ರೈಮರಿ ಸೊಸೈಟಿಗಳಿಗೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದಕ್ಕೆ ಇನ್ನು ಮಾಡಿಲ್ಲ. ೨ನೇ ದರ್ಜೆ ಗುಮಾಸ್ತರಿಂದ ಕೆಳ ಮಟ್ಟದ ನೌಕರರನ್ನು ನೇಮಿಸುವ ಇನ್ನೂ ಸಮಿತಿಗಳನ್ನು ಮಾಡಿಲ್ಲ. ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಹಕಾರ ಸಂಘಗಳಲ್ಲಿ ಮಾತ್ರ ಸಮಿತಿಗಳನ್ನು ಮಾಡಿದ್ದೇವೆ.

Constitution of Youth Service Board for Raichur District

672. SRI R. AMBANNA NAIK (Manvi)—Will the Minister of State for Information and Youth Services be pleased to state.—

(a) when the Raichur Youth Service Board was reconstituted, the number of times the meeting of the Board was convened since then, whether the Board meeting was convened regularly, the reasons for delay?

SRI GANGADHARA GOWDA (Minister of State for Information and Youth Services).—

(a) The Raichur Youth Service Board was reconstituted on 10-8-1978. The Board meeting was convened four times. The meeting could not be convened regularly due to certain inconveniences.

ಶ್ರೀ ಆರ್. ಅಂಬಣ್ಣನಾಯಕ್.—ರಾಯಚೂರು ಜಿಲ್ಲಾ ಯುವಜನ ಸೇವಾ ಮಂಡಲಿ ಪುನರ್ರಚನೆಯಾದದ್ದು ೧೫೭೮ರಲ್ಲಿ ಎಂದು ಹೇಳಿದ್ದೀರಿ. ಆದರೆ ಇದುವರೆಗೆ ಕೇವಲ ೪ ಸಭೆಗಳನ್ನು ಮಾತ್ರ ಕರೆದಿದ್ದು ಕೆಲವು ಅನಾನುಕೂಲತೆಗಳಿಂದ ಹೆಚ್ಚು ಭಾರಿ ಸಭೆ ಕರೆಯಲು ಸಾಧ್ಯವಾಗಿಲ್ಲವೆಂದು ಹೇಳಿದ್ದೀರಿ. ಅಂಥ ಅನಾನುಕೂಲತೆಗಳಾದರೂ ಏನು ? ೫ ವರ್ಷದ ಅವಧಿಯಲ್ಲಿ ಕೇವಲ ೪ ಸಭೆಗಳನ್ನು ಕರೆದಿರತಕ್ಕದು ಸಮಂಜಸವಲ್ಲ. ಇದಕ್ಕೆ ಕಾರಣವೇನು ?

ಶ್ರೀ ಗಂಗಾಧರ ಗೌಡ.—ಜಿಲ್ಲಾ ಯುವಜನ ಮಂಡಲಿಯ ಅಧ್ಯಕ್ಷರು ಜಿಲ್ಲಾಧಿಕಾರಿಗಳಾಗಿರುತ್ತಾರೆ. ಅವರು ಸಭೆಯನ್ನು ಕರೆಯಬೇಕಾಗುತ್ತದೆ. ರಾಯಚೂರು ಜಿಲ್ಲಾ ಯುವಜನ ಮಂಡಲಿಯು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಮಾನ್ಯ ಸದಸ್ಯರು ತಿಳಿಸುತ್ತಿದ್ದಾರೆ. ಅದನ್ನು ಕೆಲಸ ಮಾಡುವಂತೆ ಮಾಡಲು ನಾವು ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ಕೊಡುತ್ತೇನೆ. ಮತ್ತೂ ಕೂಡ ಕೆಲಸ ಮಾಡದಿದ್ದರೆ ಮಂಡಲಿಯನ್ನು ವಿಸರ್ಜಿಸಿ ಮಾಡಿ ಮತ್ತೆ ಬೇರೆ ಮಂಡಲಿಯನ್ನು ರಚಿಸುತ್ತೇವೆ.

ಶ್ರೀ ಎಂ.ಬಿ. ಗಂಗಣ್ಣ.—ಆ ಜಿಲ್ಲಾ ಯುವಜನ ಸೇವಾ ಮಂಡಲಿಯು ಸದಸ್ಯ ನಾನು. ಎರಡು ತಿಂಗಳಿಗೊಮ್ಮೆ ಮೀಟಿಂಗ್ ಕರೆಯಬೇಕೆಂದು ಸರ್ಕಾರಿ ಆದೇಶ ಇದೆ. ಈ ವಿಚಾರವನ್ನು ನಾನು ಆ ಮಂಡಲಿಯ ಅಧ್ಯಕ್ಷರ ಗಮನಕ್ಕೆ ಸಹ ತಂದಿದ್ದೇನೆ. ಆದರೂ ಕೂಡ ಇಲ್ಲಿಯವರೆಗೆ ಅವರು ಸಭೆಯನ್ನು ಕರೆದಿರುವುದು ಕೇವಲ ೪ ಸಾರಿ. ಇದು ಅವರ ಕರ್ತವ್ಯ ಲೋಪವನ್ನು ಎತ್ತಿ ತೋರಿಸುತ್ತದೆ. ಆದುದರಿಂದ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏತಕ್ಕೆ ಕ್ರಮ ಕೈಗೊಳ್ಳಬಾರದು ?

ಶ್ರೀ ಗಂಗಾಧರ ಗೌಡ.—ಜಿಲ್ಲಾಧಿಕಾರಿಗಳು ಹೇಳುತ್ತಾರೆ, ನಾವು ಮೀಟಿಂಗ್ ಕರೆದರೂ ಸದಸ್ಯರು ಸರಿಯಾಗಿ ಹಾಜರಾಗುತ್ತಿಲ್ಲ ಎಂದು. ಆದರೂ ಕೂಡ ಮತ್ತೆ ಜಿಲ್ಲಾಧಿಕಾರಿಗಳಿಗೆ ಹೊಸ ಆದೇಶ ನೀಡಿ ಸಮಯಕ್ಕೆ ಸರಿಯಾಗಿ ಮೀಟಿಂಗನ್ನು ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ.ಬಿ. ಗಂಗಣ್ಣ.—ಆ ಮಂಡಲಿ ಎಷ್ಟು ವರ್ಷ ಇರುತ್ತದೆ ಮತ್ತು ಅದನ್ನು ಪುನರ್ರಚಿಸಲಿಕ್ಕೆ ಸಾಧ್ಯತೆ ಇದೆಯೆ ? ಇದ್ದರೆ, ಅದನ್ನು ಪುನರ್ರಚಿಸುತ್ತೀರಾ ?

ಶ್ರೀ ಗಂಗಾಧರ ಗೌಡ.—ಆಯಿತು, ಪುನರ್ರಚಿಸುತ್ತೇವೆ.

Asphalt of Ahamadabad-Nittur Road in Bidar District

920. SHRI BHIMANNA KHANDRE (Bhalki).—Will the Minister for Public Works be pleased to state :—

(a) w-ether the Goverament has received any representations to ashalt the PWD road Ahamadabad-Nittur in Bidar District ;

(b) whether any provision is made in the new budget estimate for asphalting that road ;

(c) steps taken by Government for early asphalting of that road to facil tate the travelling public ?

SHRI KAGODU THIMMAPPA (Minister for Public Works).—

(a) Yes.

(b) Not included in the budget for 1982-83 on account of paucity of funds.

(c) Necessary action will be taken depending upon the availability of funds.

ಶ್ರೀ ಭೀಮಣ್ಣ ಖಂಡ್ರೆ.—ಅಹಮದಾಬಾದ್ ನಿಟ್ಟೂರು ರಸ್ತೆಗೆ ಜಲ್ಲಿ ಹಾಕಿಂವ ಬಗ್ಗೆ ನಾವು ೩ ವರ್ಷಗಳಿಂದಲೂ ಸತತವಾಗಿ ಮನವಿಗಳನ್ನು ಸಲ್ಲಿಸುತ್ತಲೇ ಬಂದಿದ್ದೇವೆ ಆದರೂ ಇದನ್ನು ಬಡ್ಜೆಟ್‌ನಲ್ಲಿ ಸೇರಿಸಿಲ್ಲ, ಆದುದರಿಂದ ಬಡ್ಜೆಟ್‌ನಲ್ಲಿ ಇದಕ್ಕೆ ಹಣವನ್ನು ಅಲಾಟ್‌ಮಾಡಿ ಕೆಲಸ ತೆಗೆದುಕೊಳ್ಳಬೇಕಾದರೆ ಅದಕ್ಕೆ ಏನು ಕ್ರೈಟೀರಿಯಾ ಇರಬೇಕೆಂಬುದನ್ನು ಹೇಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಕ್ರೈಟೀರಿಯಾ ಏನೆಂದರೆ ಮಾನ್ಯ ಸದಸ್ಯರು ಮತ್ತು ಸ್ಥಳೀಯರು ಯಾವ ರಸ್ತೆಯನ್ನು ಮುಖ್ಯವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತಾರೋ ಅಂಥ ರಸ್ತೆಗಳನ್ನು, ಹಣಕಾಸಿನ ದೃಷ್ಟಿಯಿಂದ ಸಹ ಗಮನದಲ್ಲಿಟ್ಟುಕೊಂಡು, ಆ ರಸ್ತೆಗಳನ್ನು ಆಧ್ಯತೆಯ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೇ ಬೀರೆ ಜಿಲ್ಲೆಗಳಲ್ಲಿ ಒಳ್ಳೊಳ್ಳೆಯ ರಸ್ತೆಗಳು ಇವೆ. ಆದರೆ ನಮ್ಮದು ಬಹಳ ಹಿಂದುಳಿದಿರತಕ್ಕ ಜಿಲ್ಲೆಯಾಗಿದ್ದು ಇಲ್ಲಿಗೆ ಹೆಚ್ಚಿಗೆ ಹಣವನ್ನು ಒದಗಿಸಿ ತೆಗೆದುಕೊಳ್ಳಿ ಎಂದು ಹಲವಾರು ಸಲ ಹೇಳಿದ್ದೇವೆ. ಮಾನ್ಯ ಸಚಿವರು ಸಹ ನಮ್ಮಲ್ಲಿಗೆ ಬಂದಿದ್ದಾಗ ಈ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೂ ತೆಗೆದುಕೊಂಡಿಲ್ಲ, ಆದುದರಿಂದ ಈಗಲಾದರೂ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಮಾತು ಸರಿಯಲ್ಲ. ಗುಲ್ಬರ್ಗ ಇಂಥಾ ತೀರಾ ಹಿಂದುಳಿದ ಪ್ರದೇಶಗಳಿಗೆ ನಾವು ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಕಳೆದ ಸಾಲಿನ ಎಸ್. ಆರ್. ಗ್ರಾಂಟನ್ನು ತೆಗೆದುಕೊಂಡು ನೋಡಿದರೆ ನಾವು ಕೊಟ್ಟಿರುವ ಹಣದಲ್ಲಿ ಅರ್ಧದಷ್ಟು ಹಣವನ್ನು ಗುಲ್ಬರ್ಗ, ಬೀದರ್ ಕಡೆಗೆ ಹೆಚ್ಚು ಖರ್ಚು ಮಾಡಿದ್ದೇವೆ ಏನ್ನುವುದನ್ನು ತೋರಿಸುತ್ತದೆ. ವಿಶೇಷವಾಗಿ ಹೆಚ್ಚು ಹಣವನ್ನು ನಾವು ಈ ಪ್ರದೇಶಕ್ಕೆ ಖರ್ಚು ಮಾಡಬೇಕು ಎನ್ನುವ ಉದ್ದೇಶದಿಂದಲೇ ಹಣವನ್ನು ಅಲ್ಲಿಗೆ ಖರ್ಚು ಮಾಡದಿದ್ದರೂ ಕೂಡ, ಮಾನ್ಯ ಸದಸ್ಯರಿಗೆ ಗೊತ್ತಿದ್ದೂ ಈ ರೀತಿಯ ಪ್ರಶ್ನೆ ಕೇಳುತ್ತಾರೆಂದರೆ, ನಾನು ಏನು ಹೇಳಬೇಕೋ ಗೊತ್ತಾಗುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನಮ್ಮ ತಾಲ್ಲೂಕಿಗೆ ತುಂಬ ಮಳೆಗಾಲದಲ್ಲಿ ಬಂದು ನೋಡಿದರೆ ಗೊತ್ತಾಗುತ್ತದೆ, ಅಲ್ಲಿ ಓಡಾಡಲು ಆಗುವುದೇ ಇಲ್ಲ, ಒಂದು ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಿಂದ ಮತ್ತೊಂದು ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗೆ ಹೋಗಲು ಆಗುತ್ತಿಲ್ಲ. ಆದಕ್ಕೆ ನಾನು ಕೇಳುತ್ತಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕದ್ದನ್ನು ನಾವು ಗಮನದಲ್ಲಿಟ್ಟು ಕೊಂಡು ಹಿಂದೆ ಗುಲ್ಬರ್ಗದಲ್ಲಿ ನಡೆದಂಥ ಕ್ಯಾಬಿನೆಟ್ ಸಭೆಯನ್ನು ಕೂಡ ಈ ಡಿವಿಜನ್ ಪ್ರಾಮುಖ್ಯವಾದ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದಲೇ ಅದಕ್ಕೆ ೧ ಕೋಟಿ ರೂ.ಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ಅದನ್ನು ಕಾರ್ಯಗತ ಮಾಡತಕ್ಕ ಹಂತದಲ್ಲಿದ್ದೇವೆ. ಅನೇಕ ಸಾರಿ ಮಾನ್ಯ ಸದಸ್ಯರು ನನ್ನನ್ನು ಭೇಟಿ ಮಾಡಿದಾಗ ಯಾವ ಯಾವ ಪ್ರಾಮುಖ್ಯವಾದ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೋ ಅದನ್ನು ಗಮನದಲ್ಲಿಟ್ಟುಕೊಂಡೇ ಆ ರಸ್ತೆಗಳನ್ನು ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ನಿರ್ದಿಷ್ಟವಾಗಿ ಎಷ್ಟು ವರ್ಷಗಳಲ್ಲಿ ಈ ಕೆಲಸವನ್ನು ಮಾಡಿ ಕೊಡುತ್ತೀರಾ ಎಂದು ಹೇಳುತ್ತೀರಾ, ೧೦ ವರ್ಷನೋ ಇಲ್ಲ ೨೦ ವರ್ಷನೋ ಎನ್ನುವ ಬಗ್ಗೆ ನಿರ್ದಿಷ್ಟವಾಗಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಮುಂಖ್ಯವಾದ ರಸ್ತೆ ಎಂದು ಏನು ಹೇಳುತ್ತಿದ್ದಾರೆ ಅದನ್ನು ಈ ವರ್ಷವೇ ಸಿಂಪಲ್ ಆಗಿ ಮೆಟರ್ ಮಾಡತಕ್ಕ ಕೆಲಸವನ್ನು ಮಾಡಿಸಿ ಕೊಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ೯೬೯ನ್ನು ತಡೆಹಿಡಿಯಲಾಗಿದೆ. ಮುಂದಿನ ಪ್ರಶ್ನೆ ಶ್ರೀ ಎಸ್. ಎಸ್. ಅರಕೇರಿ ಪ್ರಶ್ನೆ ನಂ. ೯೫೭.

Completion of Ghataprabha Project

957. SRI S.S. ARAKERI (Balloli).—Will the Minister of State for Major and Medium Irrigation be pleased to state :

(a) whether it is a fact that the work of Ghataprabha Project is suspended for want of money ;

(b) if not, the amount spent every year from January 1980 upto date ;

(c) whether it is a fact that the Hon'ble Prime Minister has directed the State Government to complete Ghataprabha Project within 3 years ;

(d) if so, the steps taken by the Government to take up this project for completion within the stipulated period of three years ?

SRI B.B. CHIMMANAKATTI (Minister of State for Major and Medium Irrigation)

(a) No works are suspended in the Ghataprabha Project for want of money. Construction programmes is worked out every year depending upon the budget allotment and the works are carried out accordingly in a phased manner ;

(b) The amount spent from January 1980 upto date in Ghataprabha Project is as under :

	Lakhs
January 1980 to March 1980	Rs. 244.02
1980–81	Rs. 660-54
1981–82 (2/82)	Rs. 502–44